ಅಧ್ಯಕ್ಷರು : ಅವರು ಜಾಗವನ್ನು ಮಂಜೂರು ಮಾಡಿಸಿಕೊಂಡು ಮನೆಯನ್ನು ಕಟ್ಟಿಕೊಂಡಿದ್ದಾರೆಯೇ, ಕೇಳಿ ಅವರನ್ನು ಹೇಳುತ್ತಾರೆ. ಆದ್ದರಿಂದ, ಕಂದಾಯ ವಿಷಯ ಬಂದಾಗ ಇದನ್ನೆಲ್ಲಾ ಚರ್ಚೆ ಮಾಡೋಣ. You throw some light. ಚರ್ಚೆ ಮಾಡುವುದು ಬಾಕಿಯಿದೆ. ಏಕೆಂದರೆ, ಸೆಕ್ಷನ್ 192ನ್ನು ನೀವೇ ಜಾರಿಗೆ ತಂದವರು. ಕಂದಾಯ ಇಲಾಖೆಯ ಬೇಡಿಕೆಗಳು ಮೇಲೆ ಚರ್ಚೆ ಮಾಡುವಾಗ ಈ ಎಲ್ಲ ವಿಚಾರಗಳ ಬಗ್ಗೆ ಚರ್ಚೆ ಮಾಡಿ, ಬೆಳಕು ಚೆಲ್ಲೋಣ.

ವನ್ಯ ಮೃಗಗಳಿಂದ ರೈತರ ಬೆಳೆ ಹಾನಿಯಾಗುತ್ತಿರುವುದು

12 (64) ಶ್ರೀ ಕೋಳಿವಾಡ ಕೆ.ಬಿ. (ರಾಣೆಬೆನ್ನೂರು) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ವನ್ಯ ಮೃಗಗಳಿಂದ ರೈತರ ಬೆಳೆಗಳಿಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅರಣ್ಯ ಬಿಟ್ಟು ರೈತರ ಹೊಲಗಳಿಗೆ ಮೃಗಗಳು ಹೋಗದಂತೆ ಸರ್ಕಾರ ಕೈಗೊಂಡ ಕ್ರಮವೇನು ;

(ಆ) ರಾಣೇಬೆನ್ನೂರು ವನ್ಯಧಾಮ ದೇಶದಲ್ಲೇ ಪ್ರಸಿದ್ಧವಾಗಿದ್ದು, ಆ ಅರಣ್ಯದಲ್ಲಿ ಪ್ರವಾಸೋದ್ಯಮ ಕೇಂದ್ರ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು) :–

(ಅ) ಇಲಾಖೆ ಮತ್ತು ಗ್ರಾಮಸ್ಥರ ಸಹಯೋಗದೊಂದಿಗೆ ಪ್ರತಿ ರೈತನಿಗೆ ಅಥವಾ ರೈತರ ಗುಂಪಿಗೆ ಸಹಾಯಧನ ರೂಪದಲ್ಲಿ ಅಂದರೆ 50:50 ಅನುಪಾತದಲ್ಲಿ ಸೋಲಾರ ತಂತಿಬೇಲಿ ನಿರ್ಮಾಣ ಮಾಡುವ ಹೊಸ ಯೋಜನೆಯನ್ನು 2014–15 ಸಾಲಿನಿಂದ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೇವು ಪೂರೈಕೆ ಜಾಗಗಳ ನಿರ್ಮಾಣ, ವನ್ಯ ಪ್ರಾಣಿಗಳಿಗೆ ಕುಡಿಯಲು ನೀರಿನ ಬಾನಿ ನಿರ್ಮಾಣ, ವನ್ಯಪ್ರಾಣಿಗಳು ಅಭಯಾರಣ್ಯ ಬಿಟ್ಟು ಹೊರಗೆ ಹೋಗದಂತೆ ಅಭಯಾರಣ್ಯದಲ್ಲಿ ಮೇವಿನ ಬೆಳೆಯಲಾಗಿದೆ ಹಾಗೂ ಜಾನುವಾರು ನಿರೋಧಕ ಕಂದಕ ನಿರ್ಮಾಣ ಮಾಡಲಾಗಿದೆ.

(ಆ) ಇಲ್ಲ.

ಶ್ರೀ ಕೆ.ಬಿ. ಕೋಳಿವಾಡ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ 64ನ್ನು ಮಾನ್ಯ ಅರಣ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಅಧ್ಯಕ್ಷರು : ಆಗಲೇ ವನ್ಯಮೃಗಗಳಿಂದ ರೈತರ ಬೆಳೆಗೆ ಆಗುತ್ತಿರುವ ಹಾನಿಗೆ ಪರಿಹಾರ ಕೊಡುವ ವಿಷಯ ಪ್ರಸ್ತಾಪವಾಗಿತ್ತಲ್ಲ ?

ಶ್ರೀ ಕೆ.ಬಿ. ಕೋಳಿವಾಡ : ಈಗ ಮತ್ತೊಮ್ಮೆ ಕೇಳುತ್ತಿದ್ದೇವೆ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಕೆ.ಬಿ. ಕೋಳಿವಾಡ : ಮಾನ್ಯ ಅರಣ್ಯ ಸಚಿವರಿಗೆ ವನ್ಯ ಮೃಗಗಳು ಎಂದ ತಕ್ಷಣ ಆನೆಗಳು ಎನ್ನುವ ವಿಷಯ ತಲೆಯೊಳಗೆ ಬಂದು ಬಿಡುತ್ತದೆ. ಬೇರೆ ಯಾವುದೇ ಪ್ರಾಣಿಗಳು ಅವರ ಕಣ್ಣ ಮುಂದೆ ಬರುವುದಿಲ್ಲ. ನಮ್ಮ ಕಡೆ ಜಿಂಕೆಗಳಿವೆ, ಕಾಡು ಹಂದಿಗಳಿವೆ. ಅರಣ್ಯದ 8 ರಿಂದ 10 ಕಿ.ಮೀ. ಸುತ್ತ-ಮುತ್ತಲೂ ರೈತ ಯಾವುದೇ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೋಸ್ಕರ, ಇವರು ನೀಡಿರುವ ಉತ್ತರದಲ್ಲಿ 50:50 ಅನುಪಾತದಲ್ಲಿ ಸೋಲಾರ್ ತಂತಿಬೇಲಿ ನಿರ್ಮಾಣ ಮಾಡುವ ಹೊಸ ಯೋಜನೆಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. 50:50ರ ಅನುಪಾತ ಎಂದರೆ ಶೇಕಡ. 50ರಷ್ಟು ಹಣವನ್ನು ರೈತನಿಂದ ಭರಿಸಲು ಸಾಧ್ಯವಿದೆಯೇ ? ರೈತರಿಗೆ ಏಕೆ ಇಷ್ಟು ಹಿಂಸೆ ಕೊಡುತ್ತೀರಿ? ಸರ್ಕಾರವೇ 100ಕ್ಕೆ 100ರಷ್ಟು ಹಣವನ್ನು ಭರಿಸಿ ಸೋಲಾರ್ ತಂತಿಬೇಲಿಯನ್ನು ಏತಕ್ಕೆ ಅಳವಡಿಸಬಾರದು ?

ಶ್ರೀ ಬಿ.ರಮಾನಾಥ ರೈ : 100ಕ್ಕೆ 100ರಷ್ಟು ಸರ್ಕಾರವೇ ಹಣವನ್ನು ಒದಗಿಸಿಕೊಂಡು ತಂತಿಬೇಲಿಯನ್ನು ಹಾಕುವ ಕಾರ್ಯಕ್ರಮ ನಮ್ಮ ಇಲಾಖೆಯಲ್ಲಿ ಇದೆ. ಏಕೆಂದರೆ, ಸಾಕಷ್ಟು ಕಡೆಗಳಲ್ಲಿ ಸೋಲಾರ್ ಫೆನ್ಸಿಂಗ್ ಹಾಕಿರುವುದು ಸರಿಯಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕಾಗಿ ರೈತರಿಗೆ ನಾವು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ರೈತರ ಬೇಡಿಕೆ ಪ್ರಕಾರ ಅವಕಾಶವನ್ನು ಕೊಟ್ಟಿದ್ದೇವೆ. ಆ ಪ್ರಕಾರ ನೀವೇ ಮಾಡುವುದಾದರೆ ಮಾಡಬಹುದು.

ಅಧ್ಯಕ್ಷರು : ಅವರ ಪ್ರಶ್ನೆಗೆ ಉತ್ತರ ಹೇಳಿ. ಇಲಾಖೆ ವತಿಯಿಂದಲೇ ಸೋಲಾರ್ ಫೆನ್ಸಿಂಗ್ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಬಿ.ಕೋಳಿವಾಡ : ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಿರುವ ಪ್ರಶ್ನೆ ಏನೆಂದರೆ, 50:50ರ ಅನುಪಾತದಲ್ಲಿ ಬೇಡ, 100ಕ್ಕೆ 100ರಷ್ಟು ಸರ್ಕಾರವೇ ಹಣವನ್ನು ಒದಗಿಸಿಕೊಂಡು ಸೋಲಾರ್ ಫೆನ್ಸಿಂಗ್ ಮಾಡಿಸಬೇಕು. ಆಗುತ್ತದೇಯೇ ಅಥವಾ ಇಲ್ಲವೇ ಎಂದು ಹೇಳಿ.

ಅಧ್ಯಕ್ಷರು : ಆಗುತ್ತದೆಯೇ ಅಥವಾ ಇಲ್ಲವೇ ಎಂದು ಉತ್ತರ ಹೇಳಿ.

ಶ್ರೀ ಬಿ.ರಮಾನಾಥ ರೈ : ಆನೆ ಕಂದಕಗಳಿಗಾಗಲಿ ಅಥವಾ ಸೋಲಾರ್ ಫೆನ್ಸಿಂಗ್ ಆಗಿರಲಿ, ಇವೆಲ್ಲವನ್ನು ಸರ್ಕಾರವೇ ನಿರ್ಮಾಣ ಮಾಡುತ್ತದೆ. ಫೆನ್ಸಿಂಗ್ ಮಾಡಬಹುದಾದ ಕಡೆ ಸರ್ಕಾರವೇ ಮಾಡುತ್ತದೆ. ಆದರೆ, ಕೆಲವು ರೈತರ ಬೇಡಿಕೆ ಇದೆ.

ಶ್ರೀ ಕೆ.ಬಿ. ಕೋಳಿವಾಡ : ಯಾವ ರೈತರೂ ನಾವೇ ನಿರ್ಮಿಸಿಕೊಳ್ಳುತ್ತೇವೆ ಎಂದು ಹೇಳುವುದಿಲ್ಲ, ಸರ್ಕಾರದ ವತಿಯಿಂದಲೇ ಮಾಡಿಕೊಡಿ.

ಶ್ರೀ ಬಿ.ರಮಾನಾಥ ರೈ : ಕೇಳಿದಂಥವರಿಗೆ ನಾವು ಅವರವರ ಜಾಗದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಅವಕಾಶ ಮಾಡುತ್ತಿದ್ದೇವೆ.

ಅಧ್ಯಕ್ಷರು : ಇವರು ಕೇಳಿರುವ ಪ್ರಶ್ನೆಗೆ ನೇರವಾಗಿ ಉತ್ತರಹೇಳಿ.

ಶ್ರೀ ಬಿ.ರಮಾನಾಥ ರೈ : ಇವರ ಪ್ರದೇಶದಲ್ಲಿ ಜಿಂಕೆಗಳು ಮತ್ತು ಕಾಡು ಹಂದಿಗಳಿಗಂದ ಆಗುತ್ತಿರುವಂಥ ಸಮಸ್ಯೆ ಬಗ್ಗೆ ಕೇಳಿದ್ದಾರೆ. ವನ್ಯಜೀವಿಗಳ ಸಂರಕ್ಷಣೆ ಮಾಡುವಂಥ ಕಾರ್ಯಕ್ರಮ ಬಂದ ನಂತರ ಪ್ರಾಣಿಗಳ ಸಂಖ್ಯೆ ಜಾಸ್ತಿಯಾಗಿದೆ.

ಶ್ರೀ ಕೆ.ಬಿ. ಕೋಳಿವಾಡ : ಮಾನ್ಯ ಮಂತ್ರಿಗಳೆ, ನನ್ನ ಪ್ರಶ್ನೆ ನೇರವಾಗಿದೆ. 100ಕ್ಕೆ 100ರಷ್ಟು ಹಣವನ್ನು ಸರ್ಕಾರದಿಂದ ಭರಿಸಿ ತಂತಿಬೇಲಿ ಹಾಕುತ್ತೀರ ಅಥವಾ ಇಲ್ಲವೇ ?

ಶ್ರೀ ಬಿ.ರಮಾನಾಥ ರೈ : ಎಲ್ಲಿ ಸಮಸ್ಯೆಗಳಿವೆ, ಆ ಪ್ರದೇಶದಲ್ಲಿ ಪ್ರಾಣಿಗಳ ಹಾವಳಿಯನ್ನು ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮ ಹಾಕಬೇಕಾಗಿದೆ, ಅದರ ಬಗ್ಗೆ ಸೋಲಾರ್ ಫೆನ್ಸಿಂಗ್ ಹಾಕಬೇಕು ಎಂದು ಬೇಡಿಕೆ ಇದ್ದರೆ ನಾವು ಹಾಕುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ : ನನ್ನ ಪ್ರಶ್ನೆಗೆ ನೇರವಾಗಿ ಉತ್ತರ ಸಿಗಲಿಲ್ಲ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಇಲ್ಲಿವರೆಗೆ ಅರಣ್ಯ ಇಲಾಖೆ ವತಿಯಿಂದಲೇ ಎಲ್ಲಾ ಕಡೆ ಸೋಲಾರ್ ಫೆನ್ಸಿಂಗ್ ಮಾಡಿದ್ದೇವೆ.

ಶ್ರೀ ಕೆ.ಬಿ. ಕೋಳಿವಾಡ : ಅದೇ ರೀತಿ ಮಾಡಿ, ರೈತರಿಂದ ಶೇಕಡ 50 ಏಕೆ ಪಡೆದುಕೊಳ್ಳುತ್ತೀರಿ ?

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಯಾರಾದರೂ ರೈತರು ಅವರೇ ಭರಿಸಿಕೊಂಡು ತಂತಿಬೇಲಿ ನಿರ್ಮಿಸಿಕೊಳ್ಳುವುದಿದ್ದರೆ ಅವಕಾಶ ನೀಡುತ್ತೇವೆ. ತಂತಿಬೇಲಿ ನಿರ್ಮಿಸಿಕೊಡಿ ಎಂದು ಬೇಡಿಕೆಯಿಟ್ಟರೆ ನಾವೇ ಮಾಡುತ್ತೇವೆ. ಈಗಾಗಲೇ ಸಾಕಷ್ಟು ಕಡೆಗಳಲ್ಲಿ ಸೋಲಾರ್ ಫೆನ್ಸಿಂಗ್‌ನ್ನು ಅರಣ್ಯ ಇಲಾಖೆ ವತಿಯಿಂದಲೇ ಹಾಕಿದ್ದೇವೆ. ಆದರೆ, ಅಲ್ಲಿ ರೈತರು ಇನ್ನೂ ಸ್ವಲ್ಪ ಗಟ್ಟಿಯಾಗಿರುವ ಫೆನ್ಸಿಂಗ್‌ನ್ನು ಅಳವಡಿಸಬೇಕು ಎಂದು ಹೇಳಿರುವುದರಿಂದ ಅವಕಾಶ ಕೊಟ್ಟಿದ್ದೇವೆ.

ಶ್ರೀ ಕೆ.ಬಿ. ಕೋಳಿವಾಡ : ನನ್ನ ಎರಡನೇ ಉಪ ಪ್ರಶ್ನೆಯಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸರ್ಕಾರದ ವತಿಯಿಂದ ತಂತಿಬೇಲಿಯನ್ನು ನಿರ್ಮಿಸಿ ಪ್ರಾಣಿಗಳಿಂದ ರಕ್ಷಣೆ ಕೊಡಬೇಕು, ಇಲ್ಲವೆಂದರೆ ಅವುಗಳಿಂದ ಆಗುತ್ತಿರುವ ಹಾನಿಗೆ ಪರಿಹಾರ ಕೊಡಬೇಕು. ಈ ಎರಡೇ ದಾರಿ ಇರುವುದು.

ಶ್ರೀ ಬಿ.ರಮಾನಾಥ ರೈ : ಗ್ರಾಮಗಳಿಗೆ ಬರುವ ವನ್ಯಮೃಗಗಳನ್ನು ತಡೆಗಟ್ಟುವುದಕ್ಕೆ ಈಗಾಗಲೇ ಬಜೆಟ್‌ನಲ್ಲಿ 212 ಕೋಟಿ ರೂಪಾಯಿಗಳ ಅನುದಾನ ಕೊಟ್ಟಿದ್ದಾರೆ. ಅದನ್ನು ಉಪಯೋಗಿಸಿಕೊಂಡು ಕೆಲವು ಕಡೆ ಆನೆ ಕಂದಕಗಳನ್ನು ಅಥವಾ ಇತರೆ ಪ್ರಾಣಿಗಳು ಬರದಂತೆ ತಡೆಗಟ್ಟುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ : ಇನ್ನೊಂದು ಉಪ ಪ್ರಶ್ನೆಯಿದೆ. ರಾಣೆಬೆನ್ನೂರು ವನ್ಯಧಾಮ ದೇಶದಲ್ಲೇ ಪ್ರಸಿದ್ಧವಾಗಿದ್ದು, ಆ ಅರಣ್ಯದಲ್ಲಿ ಪ್ರವಾಸೋದ್ಯಮ ಕೇಂದ್ರ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಅಧ್ಯಕ್ಷರು : ಇಲ್ಲ.

ಶ್ರೀ ಕೆ.ಬಿ. ಕೋಳಿವಾಡ : ಪ್ರವಾಸೋದ್ಯಮ ಇಲಾಖೆಗೆ ಪ್ರಸ್ತಾವನೆ ಕಳುಹಿಸಿದ್ದೇವೆ. ಮಾನ್ಯ ಮಂತ್ರಿಗಳು ಪ್ರಸ್ತಾವನೆಯನ್ನು ತರಿಸಿ ಆದಷ್ಟು ಬೇಗ ಮಂಜೂರು ಮಾಡಬೇಕು. ಏಕೆಂದರೆ ಅಲ್ಲಿ ತುಂಬಾ world famous birds. ಪ್ರಾಣಿಗಳು ಇವೆ.

ಅಧ್ಯಕ್ಷರು : ಪ್ರಸ್ತಾವನೆಯನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿ.

ಶ್ರೀ ಬಿ. ರಮಾನಾಥ ರೈ : ಪ್ರವಾಸೋದ್ಯಮ ಇಲಾಖೆ ಬೇರೆ, ಅರಣ್ಯ ಇಲಾಖೆಯೇ ಬೇರೆಯಾಗುತ್ತದೆ. ಪ್ರಸ್ತಾಪವಿದ್ದರೆ ಪರೀಶೀಲನೆ ಮಾಡುತ್ತೇವೆ.

ಜವಳಿ ಇಲಾಖೆಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳು

13 (53) ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ) :– ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಚಿಕ್ಕಬಳ್ಳಾಪುರ ಜಿಲ್ಲೆಗೆ ಕಳೆದ ಎರಡು ವರ್ಷಗಳಿಂದ ಜವಳಿ ಇಲಾಖೆಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ;

(ಆ) ಜವಳಿ ಇಲಾಖೆಯಿಂದ ಫಲಾನುಭವಿಗಳಿಗೆ ಯಾವ ಯಾವ ರೀತಿಯ ಸೌಲಭ್ಯ ಕಲ್ಪಿಸಲಾಗಿದೆ (ತಾಲ್ಲೂಕುವಾರು, ಫಲಾನುಭವಿಗಳವಾರು ಮತ್ತು ಸಹಾಯಧನದ ವಿವರ ನೀಡುವುದು) ?